# JUNE 15, 2024

## AKASHAVANI - DHARWAD

## PRADESH SAMACHARA (KANNADA) 7:05 AM

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ;** 5 ಸಾವಿರ ಕೋಟಿ ರೂಪಾಯಿ ಅನುದಾನಕ್ಕೆ, ಕ್ರಿಯಾ ಯೋಜನೆಗೆ, ಮುಖ್ಯಮಂತ್ರಿ ಸೂಚನೆ.
- **ಚಿತ್ರದುರ್ಗ ಜಿಲ್ಲೆಯಲ್ಲಿ,** ಪ್ರಸಕ್ತ ವರ್ಷದಲ್ಲಿ, 28 ಬಾಲ ಗರ್ಭಿಣಿಯರು; – ಕೆ.ಟಿ.ತಿಪ್ಪೇಸ್ವಾಮಿ, ಕಳವಳ.
- **ಮಲೆನಾಡಿನ ಹಳದಿ ಮತ್ತು ಕೆಂಪು ರುದ್ರಾಕ್ಷಿ ಹಲಸಿಗೆ,** ಕೇಂದ್ರದ ತಳಿ ಸಂರಕ್ಷಣೆ ಪ್ರಾಧಿಕಾರದಿಂದ ಮಾನ್ಯತೆ – ಎಂ.ಬಿ. ದುಷ್ಯಂತಕುಮಾರ್.
- **ವಿಶ್ವ ರಕ್ತದಾನಿಗಳ ದಿನ;** ರಾಜ್ಯಾದ್ಯಂತ, ರಕ್ತದಾನದ ಮೂಲಕ ಆಚರಣೆ.

<><><>

**ಈಗ ವಾರ್ತೆಗಳ ವಿವರ**

<><><>

**ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಗೆ,** ಆಯ–ವ್ಯಯದಲ್ಲಿ 5 ಸಾವಿರ ಕೋಟಿ ರೂಪಾಯಿ ಒದಗಿಸಲಾಗಿದೆ. ಈ ಮೊತ್ತವನ್ನು ಸಮರ್ಪಕವಾಗಿ ವ್ಯಯಿಸಲು, ಅನುವಾಗುವಂತೆ, ಜುಲೈ 15 ರೊಳಗೆ ಸೂಕ್ತ ಕ್ರಿಯಾ ಯೋಜನೆ ರೂಪಿಸುವಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ.

ಬೆಂಗಳೂರಿನಲ್ಲಿ, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಸಭೆಯ ಅಧ್ಯಕ್ಷತೆ ವಹಿಸಿ, ಅವರು ಮಾತನಾಡಿದರು. ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಬಾಕಿ ಉಳಿದಿರುವ, 3 ಸಾವಿರದ 528 ಕಾಮಗಾರಿಗಳನ್ನು, ಜುಲೈ ಅಂತ್ಯದೊಳಗೆ ಪ್ರಾರಂಭಿಸುವ ಜೊತೆಗೆ, ಶಿಕ್ಷಣ, ಆರೋಗ್ಯ, ಉದ್ಯೋಗ ಸೃಷ್ಟಿಗೆ ಒತ್ತು ನೀಡುವಂತೆ ಮುಖ್ಯಮಂತ್ರಿ ನಿರ್ದೇಶಿಸಿದರು. ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ, ಡಾಕ್ಟರ್ ಅಜಯ್ ಸಿಂಗ್, ಸೇರಿದಂತೆ ಆ ಭಾಗದ ಸಚಿವರು, ಶಾಸಕರು ಮತ್ತು ಹಿರಿಯ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

<><><>

**ಚಿತ್ರದುರ್ಗ ಜಿಲ್ಲೆಯಲ್ಲಿ** ಕಳೆದ ಸಾಲಿನಲ್ಲಿ 302 ಹಾಗೂ ಪ್ರಸಕ್ತ ವರ್ಷದಲ್ಲಿ, 28 ಬಾಲ ಗರ್ಭಿಣಿ ಪ್ರಕರಣಗಳು ಬೆಳಕಿಗೆ ಬಂದಿರುವುದು, ಗಂಭೀರ ವಿಷಯ ಎಂದು, ರಾಜ್ಯ ಮಕ್ಕಳ ಆಯೋಗದ ಸದಸ್ಯ ಕೆ.ಟಿ.ತಿಪ್ಪೇಸ್ವಾಮಿ, ಕಳವಳ ವ್ಯಕ್ತ ಪಡಿಸಿದ್ದಾರೆ. ಜಿಲ್ಲಾಧಿಕಾರಿ ಕಚೇರಿಯಲ್ಲಿ, ಮಕ್ಕಳ ಜಿಲ್ಲಾ ರಕ್ಷಣಾ ಸಮಿತಿ ಪ್ರಗತಿ ಪರಿಶೀಲಿಸಿ, ಮಾತನಾಡಿದ ಅವರು, ಬಾಲ ಗರ್ಭಿಣಿಯರ ರಕ್ಷಣೆಗೆ ಎಲ್ಲ ಇಲಾಖೆಗಳ ಅಧಿಕಾರಿಗಳು ಸಮನ್ವಯದಿಂದ ಕೆಲಸ, ನಿರ್ವಹಿಸುವಂತೆ ಸೂಚಿಸಿದರು. ಮಕ್ಕಳ ಸಹಾಯವಾಣಿ 1098ಕ್ಕೆ ಬರುವ ಕರೆಗಳನ್ನು, ಗಂಭೀರವಾಗಿ ಪರಿಗಣಿಸುವಂತೆ, ನಿರ್ದೇಶಿಸಿದರು.

<><><>

**ಈ ಮಧ್ಯೆ, ಉತ್ತರಕನ್ನಡ ಜಿಲ್ಲೆಯಲ್ಲಿ,** ಕಳೆದ ಜನವರಿಯಿಂದ ಮೇ ವರೆಗೆ, ಸಖಿ ಒನ್ ಸ್ಟಾಪ್ ಸೆಂಟರ್ ನಲ್ಲಿ, 18 ಪೋಕ್ಸೋ ಪ್ರಕರಣಗಳು ದಾಖಲಾಗಿವೆ ಎಂದು, ಜಿಲ್ಲಾಧಿಕಾರಿ ಗಂಗೂಬಾಯಿ ಮಾನಕರ ತಿಳಿಸಿದ್ದಾರೆ.

<><><>

**ಧಾರವಾಡ ತಾಲೂಕಿನ ಮುಮ್ಮಿಗಟ್ಟಿ ಗ್ರಾಮದಲ್ಲಿ,** ಡೆಂಘಿ ಜ್ವರ ಶಂಕಿತ ಬಾಲಕಿ ಸಾವು ಪ್ರಕರಣ ಹಾಗೂ ಡೆಂಘಿ ಶಂಕಿತ 7 ಪ್ರಕರಣಗಳು ಸೇರಿ, ಒಟ್ಟು 42 ತೀವ್ರ ಜ್ವರಬಾಧೆಯ ಪ್ರಕರಣಗಳು ಪತ್ತೆಯಾದ ಹಿನ್ನೆಲೆ, ಗ್ರಾಮದಲ್ಲಿ 'ಫಿವರ್ ಕ್ಲಿನಿಕ್' ಆರಂಭಿಸಲಾಗಿದೆ. 21 ಜನ ಆಶಾ ಕಾರ್ಯಕರ್ತೆಯರು, ಗ್ರಾಮದ ಪ್ರತಿ ಮನೆಗೆ ಭೇಟಿ ನೀಡಿ, ಆರೋಗ್ಯ ಸಮೀಕ್ಷೆ ಕೈಗೊಂಡು, ಕೀಟ ವಾಹಕ ರೋಗಗಳಾದ ಡೆಂಘಿ, ಚಿಕೂನ್ ಗುನ್ಯ ಬಗ್ಗೆ ಜನ ಜಾಗೃತಿ ಮೂಡಿಸುತ್ತಿದ್ದಾರೆ. ಜಿಲ್ಲಾ ಆರೋಗ್ಯಾಧಿಕಾರಿ ಡಾಕ್ಟರ್ ಶಶಿ ಪಾಟೀಲ, ಪ್ರದೇಶ ಸಮಾಚಾರಕ್ಕಾಗಿ, ಮುಮ್ಮಿಗಟ್ಟಿ ಗ್ರಾಮದ ವಸ್ತುಸ್ಥಿತಿ ಮಾಹಿತಿ ನೀಡಿದ್ದಾರೆ.

<><><>

## ಡಾ. ಶಶಿ ಪಾಟೀಲ ಧ್ವನಿ 38 ಸೆಕೆಂದುಗಳು

<><><>

**ದಕ್ಷಿಣ ಕುವೈತ್‍ನ ಮಂಗಫ್ ವಸತಿ ಪ್ರದೇಶದಲ್ಲಿ** ಸಂಭವಿಸಿದ, ಅಗ್ನಿ ಅವಘಡದಲ್ಲಿ ಮೃತಪಟ್ಟ, 40 ಜನ ಭಾರತೀಯರಲ್ಲಿ, ಕಲಬುರಗಿ ಜಿಲ್ಲೆ ಆಳಂದ ತಾಲೂಕು, ಸರಸಂಬಾ ಗ್ರಾಮದ, 42 ವರ್ಷದ ವಿಜಯಕುಮಾರ ಪ್ರಸನ್ನ ಕೂಡ ಒಬ್ಬರಾಗಿದ್ದಾರೆ. ವಿಜಯಕುಮಾರ ಅವರ ಪಾರ್ಥಿವ ಶರೀರವನ್ನು ಸ್ವ ಗ್ರಾಮ ಸರಸಂಬಾಕ್ಕೆ ಇಂದು ತರಲು, ಸಕಲ ವ್ಯವಸ್ಥೆ ಮಾಡಲಾಗಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. ಸಚಿವರು ಮೃತರ ಆತ್ಮಕ್ಕೆ ಆತ್ಮಕ್ಕೆ ಶಾಂತಿ ಕೋರಿ, ಅವರ ಕುಟುಂಬ ವರ್ಗಕ್ಕೆ ಸಾಂತ್ವನ ಹೇಳಿದ್ದಾರೆ.

<><><>

**ತುಮಕೂರು ಜಿಲ್ಲೆ, ಮಧುಗಿರಿ ತಾಲೂಕು ಚಿನ್ನೇನಹಳ್ಳಿ ಗ್ರಾಮದಲ್ಲಿ,** ಕಲುಷಿತ ನೀರು ಸೇವಿಸಿ 98 ಜನ ಅಸ್ವಸ್ಥರಾಗಿದ್ದರು. ಅವರ ಪೈಕಿ, 39 ಜನರಿಗೆ ತಾಲೂಕು ಮತ್ತು ಜಿಲ್ಲಾಸ್ಪತ್ರೆಗಳಲ್ಲಿ ಚಿಕಿತ್ಸೆ ಮುಂದುವರೆದಿದೆ. ಚಿನ್ನೇನಹಳ್ಳಿಯಲ್ಲಿ ತುರ್ತು ಚಿಕಿತ್ಸಾ ಕೇಂದ್ರ ಕಾರ್ಯಾರಂಭಿಸಿದೆ. ಗ್ರಾಮದ ಶಾಲೆಯಲ್ಲಿ ಆರು ಹಾಸಿಗೆಗಳ ತುರ್ತು ಚಿಕಿತ್ಸಾ ಕೇಂದ್ರವನ್ನು ಪ್ರಾರಂಭಿಸಲಾಗಿದೆ. ಶುದ್ಧ ಕುಡಿಯುವ ನೀರು ಪೂರೈಕೆಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಲು, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ ಪ್ರಿಯಾಂಕ ಖರ್ಗೆ, ಜಿಲ್ಲಾಡಳಿತಕ್ಕೆ ಸೂಚಿಸಿದ್ದಾರೆ.

<><><>

**ತುಮಕೂರು ಜಿಲ್ಲಾ ಆಸ್ಪತ್ರೆಯಲ್ಲಿ** ಚಿಕಿತ್ಸೆಗೆ ದಾಖಲಾದವರ ಆರೋಗ್ಯವನ್ನು, ಕೇಂದ್ರ ಸಚಿವ ವಿ.ಸೋಮಣ್ಣ ಭೇಟಿ ಮಾಡಿ, ವಿಚಾರಿಸಿದರು.

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಮಲೆನಾಡಿನ ವಿಶಿಷ್ಟ ಹಲಸಿನ ತಳಿಗಳಾದ,** ಹಳದಿ ಮತ್ತು ಕೆಂಪು ರುದ್ರಾಕ್ಷಿಗೆ ಕೇಂದ್ರದ ತಳಿ ಸಂರಕ್ಷಣೆ ಮತ್ತು ರೈತರ ಹಕ್ಕುಗಳ ಪ್ರಾಧಿಕಾರ, ಮಾನ್ಯತೆ ನೀಡಿ, ನೊಂದಾಯಿಸಿಕೊಂಡಿದೆ ಎಂದು, ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಸಂಶೋಧನಾ ನಿರ್ದೇಶಕ ಎಂ.ಬಿ.ದುಷ್ಯಂತಕುಮಾರ್ ತಿಳಿಸಿದ್ದಾರೆ. ಅಳಿವಿನಂಚಿನಲ್ಲಿರುವ ಅಪರೂಪದ ಹಲಸಿನ ತಳಿಗಳನ್ನು ಸಂರಕ್ಷಿಸಿ, ಬೆಳೆಸುವ ಹಾಗೂ ಬೆಳೆಗಾರರನ್ನು ಆರ್ಥಿಕವಾಗಿ ಸುದೃಢಗೊಳಿಸುವ ಅಗತ್ಯವಿದೆ.

ಆಸಕ್ತ ಕೃಷಿಕರಿಗೆ ತಳಿಗಳನ್ನು ತಲುಪಿಸಲು, ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ ಸಿದ್ಧವಿದೆ. ಅಷ್ಟೇ ಮಿಡಿ ಮಾವಿನಂತಹ ಅತೀ ಅಪರೂಪದ ಮಾವಿನ ವಿಶಿಷ್ಟ ತಳಿಗಳನ್ನೂ ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು, ಮಾಹಿತಿ ನೀಡಿದ್ದಾರೆ.

<><><>

**ವಿಶ್ವ ರಕ್ತದಾನಿಗಳ ದಿನವನ್ನು,** ಶುಕ್ರವಾರ ರಾಜ್ಯಾದ್ಯಂತ, ರಕ್ತದಾನದ ಮೂಲಕ ಆಚರಿಸಿದ, ವರದಿಗಳು ಬಂದಿವೆ. ರಕ್ತದಾನದ ಮಹತ್ವ, ತುರ್ತು ಸಂದರ್ಭಗಳಲ್ಲಿ ರಕ್ತದಾನಿಗಳ ಮೂಲಕ ರಕ್ತ ಸಂಗ್ರಹಣೆ, ರಕ್ತದಾನಿಗಳ ಮಾನವೀಯ ಕಾರ್ಯವನ್ನು ಶ್ಲಾಘಿಸಿ, ತನ್ಮೂಲಕ ರಕ್ತದಾನ ಮಾಡುವಂತೆ ಪ್ರೇರೇಪಿಸಲು, ಪ್ರತಿ ವರ್ಷ ಜೂನ್ 14 ರಂದು, ವಿಶ್ವ ರಕ್ತದಾನಿಗಳ ದಿನ ಆಚರಿಸಲಾಗುತ್ತದೆ.

<><><>

**ರಕ್ತದಾನದ ಮಹತ್ವ ಕುರಿತು,** ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಹುಬ್ಬಳ್ಳಿಯ ನವನಗರದ, ಪದ್ಮಶ್ರೀ ಡಾಕ್ಟರ್ ಆರ್.ಬಿ. ಪಾಟೀಲ ಸ್ಮಾರಕ, ಕರ್ನಾಟಕ ಕ್ಯಾನ್ಸರ್ ಚಿಕಿತ್ಸೆ ಹಾಗೂ ಸಂಶೋಧನಾ ಸಂಸ್ಥೆಯ, ರಕ್ತ ಭಂಡಾರದ ಹಿರಿಯ ತಜ್ಞ ವೈದ್ಯ ಡಾಕ್ಟರ್ ಉಮೇಶ್ ಹಳ್ಳಿಕೇರಿ.

<><><>

**ಡಾ. ಉಮೇಶ್ ಹಳ್ಳಿಕೇರಿ ಧ್ವನಿ 50 ಸೆಕೆಂದುಗಳು**

<><><>

**ಚಿಕ್ಕಬಳ್ಳಾಪುರದ ಜಿಲ್ಲಾ ಆಸ್ಪತ್ರೆಯಲ್ಲಿ,** ಪ್ರಥಮ ಬಾರಿಗೆ ರಕ್ತದಾನ ಮಾಡಿದ, ವಿದ್ಯಾರ್ಥಿನಿ ಜ್ಯೋತಿ, ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

**ಜ್ಯೋತಿ ಧ್ವನಿ 18 ಸೆಕೆಂದುಗಳು**

<><><>

**ಇದೇ 21ನೇ ತಾರೀಖು ಶುಕ್ರವಾರ,** ವಿಶ್ವಾದ್ಯಂತ 10ನೇ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಗುತ್ತಿದೆ. ಪ್ರಸಕ್ತ ವರ್ಷದ ಯೋಗ ದಿನಾಚರಣೆಯ ಧ್ಯೇಯವಾಕ್ಯ, 'ಮಹಿಳಾ ಸಬಲೀಕರಣಕ್ಕಾಗಿ ಯೋಗ' ಎಂದು, ಘೋಷಿಸಲಾಗಿದೆ. ಯೋಗ ದಿನ ಸಮೀಪಿಸುತ್ತಿರುವ ಹಿನ್ನೆಲೆ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ತಾಡಾಸನದ ವಿಡಿಯೋ ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದಾರೆ.

ತಾಡಾಸನದ ಭಂಗಿ ಹಾಗೂ ಈ ಆಸನದಿಂದ ಆರೋಗ್ಯದ ಮೇಲಾಗುವ ಪ್ರಯೋಜನದ ಕುರಿತು ಈ ವಿಡಿಯೋದಲ್ಲಿ ತಿಳಿಸಲಾಗಿದೆ.

<><><>

**ಎಂಡೋಸಲ್ಫಾನ್ ಸಂತ್ರಸ್ತರಿಗಾಗಿ,** ದಕ್ಷಿಣಕನ್ನಡ ಜಿಲ್ಲೆ ಪುತ್ತೂರು ತಾಲೂಕಿನ ಪಾಣಾಜೆಯಲ್ಲಿ ಇಂದು ವಿಶೇಷ ಆರೋಗ್ಯ ತಪಾಸಣಾ ಶಿಬಿರ ಆಯೋಜಿತವಾಗಿದೆ. ದಿನಾಂಕ 18 ರಂದು ಬೆಳ್ತಂಗಡಿ ತಾಲೂಕಿನ ಕಣಿಯೂರು, ಪುತ್ತೂರು ತಾಲೂಕಿನ ಕೊಯಿಲ, ಉಪ್ಪಿನಂಗಡಿ ಹಾಗೂ ಸುಳ್ಯ ತಾಲೂಕಿನ ಬೆಳ್ಳಾರೆಯಲ್ಲಿ, ಆರೋಗ್ಯ ತಪಾಸಣೆ ಶಿಬಿರ ನಡೆಯಲಿದೆ. 19 ರಂದು ಬೆಳ್ತಂಗಡಿ ತಾಲೂಕಿನ ಕೊಕ್ಕಡ ಆರೋಗ್ಯ ಕೇಂದ್ರದಲ್ಲಿ ಶಿಬಿರ ಏರ್ಪಡಿಸಲಾಗಿದೆ.

<><><>

**ಈಗ ಸಂಕ್ಷಿಪ್ತ ಸುದ್ದಿಗಳು:**

<><><>

**ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ** ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು, ಇಂದು ಮಂಡ್ಯದಲ್ಲಿ ತಮ್ಮ ಕಚೇರಿ ಉದ್ಘಾಟಿಸಲಿದ್ದಾರೆ.

<><><>

**ಬಳ್ಳಾರಿ ಜಿಲ್ಲೆ, ಸಂಡೂರು ವಿಧಾನಸಭಾ ಕ್ಷೇತ್ರದ,** ಕಾಂಗ್ರೆಸ್ ಶಾಸಕ ಇ.ತುಕರಾಂ ಸಂಸದರಾಗಿ ಆಯ್ಕೆಗೊಂಡ ಹಿನ್ನೆಲೆ, ತಮ್ಮ ಶಾಸಕ ಸ್ಥಾನಕ್ಕೆ ರಾಜಿನಾಮೆ ಸಲ್ಲಿಸಿದ್ದಾರೆ.

<><><>

**ರಾಜ್ಯಾದ್ಯಂತ ಹೋಟೆಲ್, ರೆಸ್ಟೋರಾ** ಹಾಗೂ ಲಘು ಉಪಾಹಾರ ಕೇಂದ್ರಗಳಲ್ಲಿ ಸ್ವಚ್ಛತೆ ಪಾಲಿಸದ ಬಗ್ಗೆ, ಮುಖ್ಯಮಂತ್ರಿ ಕಚೇರಿಯ ಸಾರ್ವಜನಿಕ ಕುಂದು–ಕೊರತೆ ವಿಭಾಗದ ವಿಶೇ ʼ ಕರ್ತವ್ಯಾಧಿಕಾರಿ, ತುರ್ತು ಕ್ರಮ ಕೈಗೊಂಡಿದ್ದಾರೆ.

<><><>

**ಕರ್ನಾಟಕ ಅರೆಭಾ ʼ ಸಂಸ್ಕೃತಿ** ಮತ್ತು ಸಾಹಿತ್ಯ ಅಕಾದೆಮಿ ನೂತನ ಅಧ್ಯಕ್ಷರಾಗಿ, ಸದಾನಂದ ಗೌಡ ಮಾವಜಿ ಅವರು ಮಡಿಕೇರಿಯಲ್ಲಿ, ಅಧಿಕಾರ ಸ್ವೀಕರಿಸಿದ್ದಾರೆ.

<><><>

**ರಾಜ್ಯದ ಎಲ್ಲ ನ್ಯಾಯಾಲಯಗಳಲ್ಲಿ,** ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ, ಜುಲೈ 13 ರಂದು ರಾಷ್ಟ್ರೀಯ ಲೋಕ್ ಅದಾಲತ್ ಆಯೋಜಿಸಲಾಗಿದೆ.

<><><>

**ಚಿತ್ರದುರ್ಗ ನಗರಸಭೆ ಸಹಯೋಗದಲ್ಲಿ,** ಪದವಿ ಪೂರ್ವ ಕಾಲೇಜಿನ **ನಾಲ್ಕು ನೂರಕ್ಕೂ** ಹೆಚ್ಚು ವಿದ್ಯಾರ್ಥಿಗಳು, ವಿಶ್ವ ಪರಿಸರ ದಿನ ಅಂಗವಾಗಿ, ಐತಿಹಾಸಿಕ ಸಂತೆ ಹೊಂಡದ ಸ್ವಚ್ಛತಾ ಕಾರ್ಯ ಕೈಗೊಂಡರು.

<><><>

## ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- **ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ;** 5 ಸಾವಿರ ಕೋಟಿ ರೂಪಾಯಿ ಅನುದಾನಕ್ಕೆ, ಕ್ರಿಯಾ ಯೋಜನೆಗೆ, ಮುಖ್ಯಮಂತ್ರಿ ಸೂಚನೆ.
- **ಚಿತ್ರದುರ್ಗ ಜಿಲ್ಲೆಯಲ್ಲಿ,** ಪ್ರಸಕ್ತ ವರ್ಷದಲ್ಲಿ, 28 ಬಾಲ ಗರ್ಭಿಣಿಯರು; – ಕೆ.ಟಿ.ತಿಪ್ಪೇಸ್ವಾಮಿ, ಕಳವಳ.
- **ಮಲೆನಾಡಿನ ಹಳದಿ ಮತ್ತು ಕೆಂಪು ರುದ್ರಾಕ್ಷಿ ಹಲಸಿಗೆ,** ಕೇಂದ್ರದ ತಳಿ ಸಂರಕ್ಷಣೆ ಪ್ರಾಧಿಕಾರದಿಂದ ಮಾನ್ಯತೆ – ಎಂ.ಬಿ. ದುಷ್ಯಂತಕುಮಾರ್.
- **ವಿಶ್ವ ರಕ್ತದಾನಿಗಳ ದಿನ;** ರಾಜ್ಯಾದ್ಯಂತ, ರಕ್ತದಾನದ ಮೂಲಕ ಆಚರಣೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.**

<><><>

**ಹರ್ಷ**